**ಪಾಟೀ ಸವಾಲು ಶ್ರೀ ಹೆಚ್.ಜಿ.ಎ ವಕೀಲರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗಿಲ್ಲ. ನಾನು ಎಂದಿಗೂ ಮೂಡಿಗೆರೆ ಮತ್ತು ಬಣಕಲ್ ಪೋಲಿಸ್ ಠಾಣೆಗೆ ಹೊಗಿರುವುದಿಲ್ಲ. ಅದೇ ರೀತಿ ದಿ.17.03.2023 ರಂದು ಅಂಗನವಾಡಿಯಿಂದ ನನ್ನ ಮಗಳ ಹೆಸರಿನಿಂದ ಬಾಂಡ್ ಬಂದಿದೆ ಎಂದು ಕರೆ ಬಂದಿತ್ತು ಎಂದರೆ ಸರಿಯಲ್ಲ. ಅದೇ ರೀತಿ ಆ ದಿನ ನಾವು ನಮ್ಮ ಮನೆಯ ಬೀಗದ ಕೀಯನ್ನು ಹೂವಿನ ಪಾಟ್ ಬಳಿ ಇಟ್ಟು ಹೊರಗೆ ಹೋಗಿದ್ದೆವು ಎಂದರೆ ಸರಿಯಲ್ಲ. ಚಾಸಾ-9 ರವರು ಆ ದಿನ 4.30 ರ ಸಮಯಕ್ಕೆ ನಮ್ಮನ್ನು ಮನೆಯ ಬಳಿ ಬಿಟ್ಟು ಹೋದರು ಎಂದರೆ ಸರಿಯಲ್ಲ. ಅದೇ ರೀತಿ ಮಾರ್ಚ್ 23 ರಂದು ದೇವಸ್ಥಾನಕ್ಕೆ ಹೊರಡುವ ಸಮಯದಲ್ಲಿ ಅಲ್ಮೇರವನ್ನು ತೆಗೆದು ನೊಡಲಾಗಿ ಅಲ್ಲಿ ಇದ್ದಂತಹ ಚಿನ್ನಾಭರಣಗಳು ಕಳುವು ಆಗಿದ್ದವು ಎಂದರೆ ಸರಿಯಲ್ಲ. ಅದೇ ರೀತಿ ನಮ್ಮ ಅಲ್ಮೇರದಿಂದ 29 ಗ್ರಾಂ 780 ಮಿಲಿ ತೂಕದ ಒಂದು ನೆಕ್ಲೆಸ್, 10 ಗ್ರಾಂ 780 ಮಿಲಿ ತೂಕದ ಶಾರ್ಟ್ ನೆಕ್ಲೆಸ್, 15 ಗ್ರಾಂ 100 ಮಿಲಿ ತೂಕದ ಒಂದು ಕಿವಿ ಓಲೆ ಮತ್ತು 2 ಗ್ರಾಂ 950 ಮಿಲಿ ತೂಕದ Plaintop ear ring ಕಳುವಾಗಿದ್ದವು ಎಂದರೆ ಸರಿಯಲ್ಲ. ಸದರಿ ವಿಷಯದ ಕುರಿತು ದಿ.17.03.2023 ರಂದು 11.00 ರ ಸಮಯಕ್ಕೆ ಪೋಲಿಸ್ ಠಾಣೆಗೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಅದೇ ರೀತಿ ಮೂಡಿಗೆರೆ ಪೋಲಿಸ್ ಠಾಣೆಯಿಂದ ನಮಗೆ ದೂರವಾಣಿ ಕರೆ ಬಂದಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಕರೆದುಕೊಂಡು ಬಂದು ನಮ್ಮ ಮನೆಯಿಂದ ಕಳುವಾದ ಚಿನ್ನಾಭರಣಗಳನ್ನು ನಮಗೆ ಹಿಂತಿರುಗಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಪೋಲಿಸರು ಸ್ಥಳ ಮಹಜರ್ ಕ್ರಮವನ್ನು ಜರುಗಿಸಿ ಫೋಟೋಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಮನೆಯಲ್ಲಿ ಯಾವುದೇ ಕಳ್ಳತನವಾಗಿರುವುದಿಲ್ಲ ಮತ್ತು ನಮಗೆ ಸಂಬಂಧಿಸಿದ ಚಿನ್ನಾಭರಣಗಳೆಲ್ಲಾ ನಮ್ಮ ಮನೆಯಲ್ಲೇ ಇರುತ್ತವೆ ಎಂದರೆ ಸರಿ.

**ಮರುವಿಚಾರಣೆ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ದಿ.20.02.2025 ರಂದು ನಾನು ನ್ಯಾಯಾಲಯದ ಮುಂದೆ ಸಾಕ್ಷಿಯನ್ನು ನುಡಿದ ನಂತರ ನಮ್ಮ ಊರಿನ ಹಿರಿಯರ ಸಮಕ್ಷಮ ಮಾತುಕತೆಯಾಗಿ ನಮ್ಮಗಳ ನಡುವೆ ರಾವಜಿಯಾಗಿರುತ್ತದೆ ಎಂದರೆ ಸರಿ. ನಾನು ಆರೋಪಿಯೊಂದಿಗೆ ರಾಜಿಯಾದ ಕಾರಣ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ  ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್  ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.